**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ**

**ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆ: 133/2023**

ಚಾಸಾಃ 1 ಪ್ರಾಸಾಃ1

| | | |
|---|---|---|
| ಹೆಸರು | : | ಜಿ ಕೆ ರಾಜೇಂದ್ರ |
| ಗಂಡನ/ತಂದೆಯ ಹೆಸರು | : | ಲೇಟ್ ಜಿ ಕೆಂಪಯ್ಯ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಅಬಕಾರಿ ಉಪನಿರೀಕ್ಷಕರು ಚನ್ನಪಟ್ಟಣ ವಲಯ |
| **ವಾಸ** | **:** | **ಮಂಡ್ಯ .** |

**ದಿನಾಂಕ 12.08.2025ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

ನಾನು 10.11.2016 ರಿಂದ ಇಲ್ಲಿಯವರೆಗೆ ಅಬಕಾರಿ ನಿರೀಕ್ಷಕರ ಕಛೇರಿಯಲ್ಲಿ ಅಬಕಾರಿ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 19.12.2022 ರಂದು ಸಂಜೆ 6.00 ಗಂಟೆಯ ಸಮಯದಲ್ಲಿ ಸುಳ್ಳೇರಿ ಕೃಷ್ಣಾ ಪುರ ಮುಖ್ಯ ರಸ್ತೆಯಲ್ಲಿ ಅಕ್ರಮ ಮದ್ಯ ಸಾಗಾಣಿಕೆ ಮಾರಾಟದ ಬಗ್ಗೆ ಸಿಬ್ಬಂದಿಯ ಜೊತೆ ಅಂದರೆ ಚಾಸಾ4 ರವರ ಜೊತೆ ಗಸ್ತು ಮಾಡುತ್ತಿದ್ದಾಗ ನನಗೆ ಬಂದ ಖಚಿತ ಮಾಹಿತಿಯ ಮೇರೆಗೆ ಚೌಡೇಶ್ವರಿ ಪ್ರಾವಿಷನ್ ಸ್ಟೋರ್ ಚಿಲ್ಲರೆ ಅಂಗಡಿಯಲ್ಲಿ ಮದ್ಯ ದಾಸ್ತಾನು ಮಾಡಿ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದ ಮೇರೆಗೆ ಸದರಿ ಚೌಡೇಶ್ವರಿ ಪ್ರಾವಿಷನ್ ಸ್ಟೋರ್ ಬಳಿ ಭೇಟಿ ನೀಡಿದಾಗ ಸಮವಸ್ತ್ರದಲ್ಲಿದ್ದ ನಮ್ಮಗಳನ್ನು ಕಂಡು ನ್ಯಾಯಾಲಯದ ಮುಂದೆ ಇರುವ ಆರೋಪಿ ಪರಾರಿಯಾಗಿರುತ್ತಾನೆ ಹಿಡಿಯಲು ಪ್ರಯತ್ನಿಸಿದಾಗಿ ಸಿಕ್ಕಿರುವುದಿಲ್ಲ. ನಂತರ ಅಲ್ಲೇ ಇದ್ದ ಚಾಸಾ2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ನೋಟೀಸ್ ನೀಡಿ, ನಮ್ಮ ಜೊತೆ ಪಂಚರಾಗಿ ಸಹಕರಿಸಲು ಕೋರಬೇಕೆಂದು ಕೋರಿದ್ದು, ಅವರು ಒಪ್ಪಿದ ಮೇರೆಗೆ ಪಂಚರ ಸಮಕ್ಷಮ ಅಂಗ ಶೋದನೆ ಮಾಡಿಕೊಂಡು ನ್ಯಾಯಾಲಯದಿಂದ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಕರ್ನಾಟಕ ಅಬಕಾರಿ ಕಲಂ 54 ರ ರೀತ್ಯಾ ಸ್ಥಳದಲ್ಲೇ ಶೋದನಾ ವಾರೆಂಟನ್ನು

ತಯಾರಿಸಿಕೊಂಡು ಚೌಡೇಶ್ವರಿ ಪಾವಿಷನ್ ಸ್ಟೋರ್ ಯನ್ನು ಪ್ರವೇಶ ಮಾಡಲಾಗಿ ಅಂಗಡಿಯ ಕ್ಯಾಶ್ ಟೇಬಲ್ ಪಕ್ಕದಲ್ಲಿ ಒಂದು Plastic ಚೀಲದಲ್ಲಿ ಮದ್ಯವಿರುವುದು ಕಂಡು ಬಂದಿದ್ದು, ಅವುಗಳನ್ನು ಅಂಗಡಿಯ ಮುಂಭಾಗಕ್ಕೆ ತಂದು ಪಂಚರ ಸಮಕ್ಷಮ ಹೇಳಿಕೆ ಮಾಡಲಾಗಿ ತಲಾ 180 ಮಿಲಿಯ 24 ಓಲ್ಡ್ ಟವರಿನ್ Wisky ಟೆಟ್ರಾ ಪ್ಯಾಕ್ ಗಳು, ತಲಾ 90 ಮಿಲಿಯ 48 ಸಿಲ್ವರ್ ಕಪ್ ಪಿಲ್ಲೋ ಪೌಚ್ ಗಳು ಬ್ರಾಂದಿ ಇದ್ದು ಒಟ್ಟು 8.640 ಲೀಟರ್ ಮದ್ಯ ಇರುವುದು ಕಂಡು ಬಂದಿರುತ್ತದೆ. ಆರೋಪಿ ಪರಾರಿಯಾದ ಕಾರಣ ಇದು ಅಕ್ರಮ ದಾಸ್ತಾನು ಎಂದು ಖಚಿತಪಡಿಸಿಕೊಂಡು ಇದು ಒಬ್ಬ ಮನುಷ್ಯ ಹೊಂದಬಹುದಾದ ದಾಸ್ತಾನುಗಿಂತ ಹೆಚ್ಚಿಗೆ ಹೊಂದಿರುವುದು ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಅಪರಾದ ಎಂದು, ದೊರೆತ ದಾಸ್ತಾನುವಿನಲ್ಲಿ ಓ ಟಿ Wisky 10 , ಸಿಲ್ವರ್ ಕಪ್ ಪಿಲ್ಲೋ ಪೌಚ್ ಗಳು ಬ್ರಾಂದಿ ತಲಾ 10 ಅನ್ನು ರಾಸಾಯನಿಕ ಮಾದರಿಗಾಗಿ ತೆಗೆದು, ಒಂದು ಬಿಳಿ ಬಟ್ಟೆಯಲ್ಲಿ ಹಾಕಿ, ಅರಗು ಹಚ್ಚಿ, ಇಲಾಖಾ ಸೀಲಿನಿಂದ ಮುದ್ರೆ ಹಾಕಲಾಯಿತು. ನಂತರ ಚೀಟಿಯ ಮೇಲೆ ವಿವರ ಬರೆದು, ಪಂಚರ ಸಹಿ ಮಾಡಿಸಿ, ನಾನು ಸಹಿ ಮಾಡಿ, ಉಳಿದ ದಾಸ್ತುನುನಿಗೆ ಅಂಟಿಸಲಾಯಿತು. ಎರಡು ಚೀಟಿಗಳನ್ನು ತೆಗೆಕೊಂಡು ಮೊಕದ್ದಮ್ಮೆ ವಿವರ ಬರೆದು, ಅರಗು ಹಚ್ಚಿ , ಇಲಾಖಾ ಸೀಲಿನಿಂದ ಮುದ್ರೆ ಹಾಕಿ, ಪಂಚರ ಸಹಿ ಮಾಡಿ ಮಾದರಿ ಸೀಲಿನ ನಕಲನ್ನು ತಯಾರು ಮಾಡಿದೆವು. ನಂತರ ಪರಾರಿಯಾದ ಆರೊಪಿಯ ಬಗ್ಗೆ ಗ್ರಾಮಸ್ಥರು ಮತ್ತು ಪಂಚರನ್ನು ವಿಚಾರ ಮಾಡಲಾಗಿ ತ್ಯಾಗರಾಜು ಬಿನ್ ಲೇಟ್ ದೊಡ್ಡ ಕೆಂಪೇಗೌಡ, 43 ವರ್ಷ, ಒಕ್ಕಲಿಗರು, ಚೌಡೇಶ್ವರಿ ಪಾವಿಷನ್ ಸ್ಟೋರ್ ಮಾಲೀಕರು, ಕೃಷ್ಣಾಪುರ ಗ್ರಾಮ ಎಂದು ತಿಳಿಸಿದ್ದು, ಆರೋಪಿಯನ್ನು ತನಿಖೆಯ ಸಮಯದಲ್ಲಿ ಪತ್ತೆ ಹಚ್ಚಲಾಗುವುದು ಎಂದು ತಿಳಿಸಿ, ದೊರೆತ ದಾಸ್ತಾನುವನ್ನು ಸ್ಥಳ ಮಹಜರ್ ಕ್ರಮ ಜರುಗಿಸಿ ಸಂಜೆ 6.30-8.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಲಾಯಿತು.ನಂತರ ದಾಸ್ತಾನುವನ್ನು ಇಲಾಖಾ ವಶಕ್ಕೆ ಪಡೆದು, ನಂತರ ಕಛೇರಿಗೆ ಬಂದು ಈ ಸಂಬಂದ ಮೊಕದ್ದಮ್ಮೆ ಸಂಖ್ಯೆ 22/2023 ರಂತೆ ದಾಖಲು ಮಾಡಿ ಘನ ನ್ಯಾಯಾಲಯಕ್ಕೆ ಮತುತ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ-7ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು

ಗುರುತಿಸಲಾಯಿತು. ಸಾಕ್ಷಿಯು ಮಹಜರ್ ಅನ್ನು ನೋಡುತ್ತಿದ್ದು ಅದನ್ನು ನಿಪಿ-2 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಶೋದನಾ ವಾರರೆಂಟ್ ಅನ್ನು ನೋಡುತ್ತಿದ್ದು ಅದನ್ನು ನಿಪಿ-3 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಸೀಲು ಇರುವ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಪಿ-4 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. 10 ಓಲ್ಡ್ ಟವರಿನ್ Wisky ಟೆಟ್ರಾ ಫ್ಯಾಕ್ ಗಳನ್ನು ಒಟ್ಟಾರೆಯಾಗಿ ಮು ಮಾ 1 ಎಂದು, 10 ಸಿಲ್ವರ್ ಕಪ್ ನ ಪಿಲ್ಲೋ ಬ್ರಾಂದಿ ಪೌಚ್ ಗಳನ್ನು ಒಟ್ಟಾರೆಯಾಗಿ ಮು ಮಾ 2 ಎಂದು ಗುರುತಿಸಲಾಯಿತು. ರಾಸಾಯನಿಕ ಪರೀಕ್ಷೆಗಾಗಿ ತೆಗೆದ ಬ್ಯಾಗ್ ಅನ್ನು ಮು ಮಾ 3 ಎಂದು, ಅದರ ಮೇಲೆ ಇರುವ ಚೀಟಿಯ ಮೇಲೆ ಇರುವ ನನ್ನ ಸಹಿಯನ್ನು ಮು ಮಾ 3(ಎ) ಎಂದು, Plastic ಬ್ಯಾಗ್ ಅನ್ನು ಮು ಮಾ 4 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಕೃತ್ಯವನ್ನು ಎಸಗಿರುತ್ತಾನೆ.

<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಎಲ್ ಎ ವಕೀಲರಿಂ</u>ದಃ

ನನಗೆ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ಮಾಹಿತಿ ಬಗ್ಗೆ ಪ್ರಥಮ ವರ್ತಮಾನ ವರದಿಯನ್ನು ಮಾಡಿಲ್ಲ. ಮದ್ಯ ಖರೀದಿ ಮಾಡುವವರನ್ನು ವಿಚಾರ ಮಾಡಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ 3 ಮಂದಿ ಇದ್ದರು. ಅಲ್ಲಿದ್ದವರನ್ನು ಪಂಚರನ್ನಾಗಿ ಮಾಡಿದ್ದೇವೆ. ಪಂಚಸಾಕ್ಷಿದಾರರು ಮದ್ಯವನ್ನು ಖರೀದಿ ಮಾಡಿದವರು ಅಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಚೌಡೇಶ್ವರಿ ಪಾವಿಷನ್ ಸ್ಟೋರ್ ಯಾವುದೂ ಇರಲಿಲ್ಲ ಎಂದರೆ ಸುಳ್ಳು. Plastic ಚೀಲಿನ ಮೇಲೆ ನಮ್ಮ ಇಲಾಖಾ ಸೀಲು ಇಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ 6.15 ಗಂಟೆಯಾಗಿತ್ತು. ಮಹಜರ್ ಅನ್ನು ನಾನೇ ಬರೆದಿರುತ್ತೇನೆ. ನಾನೇ ಬರೆದೆ ಎಂದು ಪಂಚನಾಮೆಯಲ್ಲಿ ಒಕ್ಕಣೆಯಿಲ್ಲ ಎಂದರೆ ಸುಳ್ಳು. ಬೀದಿ ದೀಪ ಮತ್ತು ವಾಹನದ ಲೈಟ್ ಸಹಾಯದಿಂದ ಪಂಚನಾಮೆಯನ್ನು ಬರೆದಿರುತ್ತೇನೆ. ಬೀದಿ ದೀಪ ಅಂಗಡಿಯ ಪಕ್ಕದಲ್ಲಿದೆ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್,ಲ ಮಹಜರ್ ಮಾಡಿಲ್ಲ ಎಂದರೆ ಸುಳ್ಳು. ಚೌಡೇಶ್ವರಿ ಪಾವಿಷನ್ ಸ್ಟೋರ್ ನಿಂದ ಯಾವುದೇ ಮುದ್ದೆ ಮಾಲುಗಳನ್ನು ಜಪ್ತಿ ಮಾಡಿಲ್ಲ ಎಂದರೆ ಸುಳ್ಳು. ಪ್ರತೀ ಮುದ್ದೆ ಮಾಲುಗಳ ಮೇಲೆ ಸಂಖ್ಯೆ ಕೊಟ್ಟಿರುತ್ತೇವೆ. 10 ಓಲ್ಡ್ ಟವರಿನ್ Wisky ಟೆಟ್ರಾ ಫ್ಯಾಕ್ ಗಳ ಮೇಲೆ ಸಂಖ್ಯೆಗಳು ಇಲ್ಲ ಎಂದರೆ ಸಾಕ್ಷಿಯು ಕೆಲವೊಂದರ

ಮೇಲೆ ಇದೆ ಎಂದು ನುಡಿಯುತ್ತಾರೆ. ನಮ್ಮ ಠಾಣಾ ಅಂಕಿಅಂಶಗಳಿಗೋಸ್ಕರ ಮುದ್ದೆ ಮಾಲುಗಳನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸುಳ್ಳು. ಆರೋಪಿ ಯಾವುದೇ ಕೃತ್ಯ ಎಸಗದೇ ಇದ್ದರೂ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**